ಗಾಳಿಯ ತಂಪು ಮೈಯನ್ನು ಚುಚ್ಚಿದಾಗ ಅವನು ಮತ್ತೆ ಎಚ್ಚರಗೊಂಡ. ಸರಿಯಾಗಿ ಎದ್ದು ಕೂತ. ಬಳಿಕ ಹೊಂಡದೊಳಗೆ ಧುಮುಕಿದ. ಬಾಗಿ ಹೆಣದ ಮೇಲಿರಿಸಿದ ಕಟ್ಟಿಗೆಯ ಕೊರಡನ್ನು ಮುಟ್ಟಿ ಸ್ಪರ್ಶಿಸಿದ. ಅನಂತರ ಒಂದೊಂದೇ ಕೊರಡನ್ನು ಮೇಲೆ ಚೆಲ್ಲಿದ. ಕೊರಡುಗಳನ್ನೆಲ್ಲ ಚೆಲ್ಲಿದ ಬಳಿಕ ಅಂಥ ಕತ್ತಲೆಯಲ್ಲೂ ಅವನಿಗೆ ಹೆಣದ ಬಿಳಿ ಬಟ್ಟೆ ಗೋಚರಿಸಿತು.

ಹೆಣದ ಬಳಿಯಲ್ಲಿ ಕುಳಿತು ಅವನು ಚಟ್ಟವನ್ನು ಬಿಚ್ಚತೊಡಗಿದ. ಹೆಣದ ಹಣೆಗೆ ಬಿಗಿದು ಕಟ್ಟಿದ ಹಗ್ಗವನ್ನು ಬಿಚ್ಚಿದ, ಬಳಿಕ ಸೊಂಟದ ಹಾಗೂ ಕೆಳಗಿನ ಹಗ್ಗವನ್ನು ಸಡಿಲುಗೊಳಿಸಿದ. ಹೆಣಕ್ಕೆ ಸುತ್ತಿದ ಬಟ್ಟೆಯನ್ನು ಮೆಲ್ಲಗೆ ಬದಿಗೆ ಸರಿಸಿದ. ಒಂದು ಮೃತದೇಹ ಅವನಿಗೆ ಗೋಚರಿಸಿತು. ಪಾದದಿಂದ ತಲೆಯವರೆಗೆ ನೋಟ ಹರಿಸಿದ. ತಲೆಯ ಹತ್ತಿರ ಅದು ಸ್ಥಿರಗೊಂಡಿತು. ಅವನು ತಲೆಯ ಬಳಿಗೆ ಸರಿದ. ವಾಲಿದ ಮುಖದ ಮೇಲೆ ಅವನು ಸಹಜವಾಗಿ ಕೈಯಾಡಿಸಿದ. ಕೈ ಹಣೆಯ ಮೇಲಿಂದ ಸರಿದು ತಲೆಗೂದಲು ಬಳಿಗೆ ಹೋಯಿತು. ಕೈಯಿಂದ ತಲೆಗೂದಲು ನೇವರಿಸಿದ. ನೀಳವಾದ ತಲೆಗೂದಲು! ಹೆಣ್ಣಿನ ಕೂದಲು! ಅದು ಯಾವುದೋ ಹೆಣ್ಣಿನ ಹೆಣವಾಗಿತ್ತು. ಯಾರಾಗಿರಬಹುದು? ತರುಣಿಯೇ? ಅಥವಾ ಚೊಕ್ಕ ಮುದುಕಿಯೇ?

ಚಡಪಡಿಸುತ್ತ ಅವನು ಎದ್ದು ಗೋರಿಯ ಹೊರಗೆ ಬಂದ. ಬರುವಾಗ ತಂದಿದ್ದ ಮೊಂಬತ್ತಿ ಹಾಗೂ ಕಡ್ಡಿ ಪೆಟ್ಟಿಗೆಯನ್ನು ಎತ್ತಿಕೊಂಡ. ಬಳಿಕ ಗೋರಿಯೊಳಗೆ ಇಳಿದು ಅವನು ಮೊಂಬತ್ತಿಯನ್ನು ಹೊತ್ತಿಸಿದ. ಚಟ್ಟದ ಮೇಲಿಟ್ಟ ಮೊಂಬತ್ತಿಯ ಬೆಳಕು ಗೋರಿಯ ತುಂಬ ಪಸರಿಸಿತು. ಮಣ್ಣಿನ ಹೆಂಟೆಗಳ ನಡುವೆ ಅಂಗಾತ ಮಲಗಿದ ಹೆಣ್ಣಿನ ದೇಹವನ್ನು ರಸೂಲ ನೋಡಿದ. ಅವಳ ಅವಯವ ಅದೇ ತಾನೇ ತುಂಬಿಕೊಳ್ಳಲಾರಂಭಿಸಿತ್ತು. ಸಾವಿನ ಕಳೆ ಅವಳ ಮುಖದ ಮೇಲೆ ಗೋಚರಿಸುತ್ತಿರಲಿಲ್ಲ. ಈಗ ತಾನೇ ನಿದ್ದೆ ಹೋದವಳಂತೆ ಕಾಣುತ್ತಿದ್ದಳು. ನಿದ್ದೆಯಲ್ಲೇ ಅವಳ ಕೂದಲು ಕೆದರಿದಂತಿತ್ತು. ಅವಳ ಕಂಗಳು ಅರ್ಧ ತೆರೆದುಕೊಂಡಿದ್ದವು. ನಿದ್ದೆಯಲ್ಲೇ ಅವಳು ಕಣ್ಣು ಪಿಳುಕಿಸಿ ರಸೂಲನನ್ನು ನೋಡುತ್ತಿರುವಂತೆ ಭಾಸವಾಯಿತು.

ಅವಳ ದೇಹದ ಮೇಲಿನ ಬಟ್ಟೆಯನ್ನು ರಸೂಲ ಕ್ಷಣಾರ್ಧದಲ್ಲಿ ಬದಿಗೆ ಸರಿಸಿ ಅವಳ ಎಲ್ಲ ಅವಯವಗಳನ್ನು ದಿಟ್ಟಿಸಲಾರಂಭಿಸಿದ. ಅವಳ ಗೋಧಿಬಣ್ಣದ ಮುಖ, ಅರೆ ತೆರೆದ ಕಂಗಳು, ನೀಳವಾದ ಮೂಗು, ಸಪೂರ ಕೊರಳು, ಅದೇ ತಾನೇ ತುಂಬಿಕೊಳ್ಳುತ್ತಿರುವ ಎದೆ ಮತ್ತು ತೊಡೆ! ಕಾಲಿನ ಸೆಟೆದ ಬೆರಳುಗಳು– ಒಬ್ಬ ಎಳೆ ಹುಡುಗಿಯ ಬೆತ್ತಲೆ ದೇಹ!

ಅವನ ದೇಹ ರೋಮಾಂಚನಗೊಂಡಿತು. ಹೆಣದ ಬಟ್ಟೆಯನ್ನು ಎತ್ತುವ ಅವಸರವನ್ನು ಅವನು ಮಾಡಲಿಲ್ಲ. ಕೆಲ ಕಾಲ ಅವನು ಆ ಹೆಣ್ಣು ದೇಹವನ್ನು ಬರೇ ದಿಟ್ಟಿಸುತ್ತಲೇ ಉಳಿದ. ಆನಂತರ ಮೆಲ್ಲಗೆ ಅವಳ ಮೂಗಿನ ತುದಿಯನ್ನು ಸ್ಪರ್ಶಿಸಿದ. ತಣ್ಣಗಿನ ಮೂಗಿನ ಸ್ಪರ್ಶವಾಯಿತು. ಅವಳ ಕೆನ್ನೆಯನ್ನು ನೇವರಿಸಿದ. ತಲೆಗೂದಲ ಮೇಲೆ ನವಿರಾಗಿ ಕೈಯಾಡಿಸಿದ. ಅದೆಷ್ಟು ನವಿರಾಗಿತ್ತೆಂದರೆ ಅವಳು ನಿದ್ದೆಯಿಂದ ಎಲ್ಲಿ ಎಚ್ಚೆತ್ತು ಬಿಡುವಳೋ ಎಂಬ ಭಯ ಅವನಿಗಾಯಿತು. ಎರಡೂ ಕೈಗಳಿಂದ ಮೋರೆಯನ್ನು ನೇವರಿಸಿದ. 'ಬೇಡ, ಬೇಡ' ಎಂದಂತಾಯಿತು. ವಾಲಿದ ತಲೆಯನ್ನು ನೇರವಾಗಿಸಿದ. ಆದರೆ ಅವನು ಕೈ ಬಿಟ್ಟಿದ್ದೇ ಅದು ಮತ್ತೆ ಮೊದಲಿನಂತೆ ವಾಲಿತು.

ಅವನ ದೇಹ ಮತ್ತೊಮ್ಮೆ ರೋಮಾಂಚನಗೊಂಡಿತು. ಏನಾಗುತ್ತಿದೆ ಎನ್ನುವುದೇ ಅವನ ಅರಿವಿಗೆ ಬರಲಿಲ್ಲ. ಹೆಣದ ಬಟ್ಟೆಯನ್ನು ಎತ್ತಿಕೊಂಡ, ಮತ್ತೆ ಗೋರಿಗೆ ಮಣ್ಣು ಸೇರಿಸಬೇಕೆಂದು ಅವನಿಗೆ ಅನಿಸಿತು. ಆದರೆ ಅಲ್ಲಿಂದ ಎದ್ದು ಹೋಗಲು ಅವನ ಮನಸ್ಸು ಒಪ್ಪಲಿಲ್ಲ. ಅವನ ಕೈ ಎಂದಿನಂತೆ ಹೆಣದ ಬಟ್ಟೆಯತ್ತ ಸರಿಯದೇ ಅವಳ ಬಿಳಿಗಲ್ಲವನ್ನು ನೇವರಿಸಲಾರಂಭಿಸಿತು. ಬಳಿಕ ರೆಪ್ಪೆಯತ್ತ ಸರಿಯಿತು. ಅವಳ ನೀಳ ತಲೆಗೂದಲಿನೊಂದಿಗೆ ಹುಡುಗಾಟ ಮಾಡಲಾರಂಭಿಸಿತು.